# ನೀನಾಸಮ್ ರಂಗಶಿಕ್ಷಣ ಕೇಂದ್ರ

ಹೆಗ್ಗೋಡು, ಸಾಗರ, ಕರ್ನಾಟಕ ೫೭೭ ೪೧೭
ದೂರವಾಣಿ ೦೮೧೮೩-೨೬೫೬೪೬ ಅಂತರ್ಜಾಲ: www.ninasam.org

## ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್: ೨೦೨೫-೨೬
## ಪ್ರವೇಶ ಕೋರಿ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಸೂಚನೆಗಳು

ನೀನಾಸಮ್ ರಂಗಶಿಕ್ಷಣ ಕೇಂದ್ರದ ೨೦೨೫-೨೬ನೆಯ ವರ್ಷಕ್ಕೆ ಪ್ರವೇಶ ಬಯಸಿ ಅರ್ಜಿ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ತುಂಬುವಾಗ ಮತ್ತು ಆಮೇಲಿನ ಸಂದರ್ಶನದಲ್ಲಿ ಭಾಗವಹಿಸುವಾಗ ಗಮನಿಸಲೇಬೇಕಾದ ಕೆಲವು ಮುಖ್ಯ ಸೂಚನೆಗಳು ಇಲ್ಲಿವೆ.

**೧. ತರಬೇತಿಯ ಸಾಮಾನ್ಯ ನಿಯಮಗಳು:**

- ರಂಗಶಿಕ್ಷಣ ಕೇಂದ್ರದ ಪರಿಚಯ ಪತ್ರದಲ್ಲಿ ಸೂಚಿಸಿದ ಎಲ್ಲಾ ನಿಯಮಕ್ಕೆ ಹಾಗೂ ಶಿಸ್ತಿಗೆ ಬದ್ಧರಾಗಿರಲು ಸಾಧ್ಯ ಎಂಬುದನ್ನು ನೀವು ದೃಢಪಡಿಸಿಕೊಳ್ಳಬೇಕು. ಮತ್ತು ಈ ಊರಿನ ಹವಾಮಾನ, ಊಟ ತಿಂಡಿ ಹಾಗೂ ವಸತಿಯ ಅನುಕೂಲತೆಗಳಿಗೆ ನೀವು ಹೊಂದಿಕೊಳ್ಳಬೇಕು.
- ಪ್ರತಿದಿನ ಬೆಳಿಗ್ಗೆ ೭ರಿಂದ ರಾತ್ರಿ ೯ರ ವರೆಗೆ (ಅಗತ್ಯ ಬಿಡುವುಗಳೊಂದಿಗೆ) ನಡೆಯುವ ತರಬೇತಿಯ ಕಠಿಣ ದೈಹಿಕ ಮಾನಸಿಕ ಪರಿಶ್ರಮಕ್ಕೆ ನೀವು ತಯಾರಾಗಿರಬೇಕು. ಆಯ್ಕೆಯಾದರೆ, ಇಂಥ ಪರಿಶ್ರಮಕ್ಕೆ ಅಗತ್ಯವಾದ ದೈಹಿಕ-ಮಾನಸಿಕ ಸಾಮರ್ಥ್ಯ ಇದೆಯೆಂದು ನುರಿತ ವೈದ್ಯರಿಂದ ದೃಢೀಕರಣ ಪತ್ರ ತರಬೇಕಾಗುತ್ತದೆ.
- ವರ್ಷದಲ್ಲಿ ಒಮ್ಮೆ ಮಧ್ಯಂತರ ರಜಾದಿನಗಳನ್ನು ಬಿಟ್ಟರೆ ಕೇಂದ್ರವು ಭಾನುವಾರವೂ ಸೇರಿದಂತೆ ಎಲ್ಲಾ ದಿನಗಳಲ್ಲೂ ಕೆಲಸ ಮಾಡುತ್ತದೆ. ಇದಕ್ಕೆ ನೀವು ಸಿದ್ಧರಿರಬೇಕು. ತರಗತಿ ಮತ್ತು ತಾಲೀಮುಗಳ ಸಮಯದಲ್ಲಿ ವಿದ್ಯಾರ್ಥಿಗಳು ಮೊಬೈಲ್ ಫೋನ್ ಬಳಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.
- ತರಬೇತಿಯ ಅವಧಿಯಲ್ಲಿ ಯಾವುದೇ ಕಾರಣಕ್ಕೂ ವೈಯಕ್ತಿಕ ರಜೆ ಕೇಳುವ ಹಾಗಿಲ್ಲ. ಶಿಕ್ಷಣದ ಅವಧಿಯಲ್ಲಿ ಯಾವುದೇ ಸಂದರ್ಶನ ಅಥವಾ ಪರೀಕ್ಷೆಗಳಿಗೆ ಹಾಜರಾಗಲು ಅವಕಾಶ ಇರುವುದಿಲ್ಲ.
- ಅಪರೂಪದ ಸಂದರ್ಭಗಳಲ್ಲಿ ಹೊರತುಪಡಿಸಿ ೩೦ ವರ್ಷಕ್ಕೆ ಮೀರಿದ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಲಾಗುವುದಿಲ್ಲ.

**೨. ಸಂದರ್ಶನದ ಸ್ವರೂಪ ಮತ್ತು ವಿಧಾನ:**

- ಈ ಬಾರಿಯ ಆಯ್ಕೆಗೆ ಸಂದರ್ಶನವನ್ನು ಪ್ರತ್ಯೇಕ ಗುಂಪುಗಳಲ್ಲಿ ನಡೆಸಲಾಗುತ್ತದೆ. ಪ್ರತಿಯೊಬ್ಬರಿಗೂ ಈ ದಿನಾಂಕ ಮತ್ತು ಸಮಯದ ಬಗ್ಗೆ ದೂರವಾಣಿ-ವಾಟ್ಸಪ್ ಮುಖಾಂತರ ಮಾಹಿತಿ ನೀಡಲಾಗುತ್ತದೆ. ಪ್ರಾಯೋಗಿಕ ಸಂದರ್ಶನದಲ್ಲಿ ಅಭ್ಯರ್ಥಿಗಳಿಂದ ರಂಗ ಅಭ್ಯಾಸ, ಸಂಗೀತ-ನೃತ್ಯ ಮೊದಲಾದ ಚಟುವಟಿಕೆಗಳನ್ನು ಇಲ್ಲಿಯ ಶಿಕ್ಷಕರು ನಡೆಸುತ್ತಾರೆ. ವೈಯಕ್ತಿಕ, ಮೌಖಿಕ ಸಂದರ್ಶನದಲ್ಲಿ ಪ್ರತಿಯೊಬ್ಬರನ್ನೂ ಪ್ರತ್ಯೇಕವಾಗಿ ಸಂದರ್ಶಿಸಲಾಗುತ್ತದೆ.
- ಈ ಸಂದರ್ಶನಗಳಲ್ಲಿ ಮುಖ್ಯವಾಗಿ ನೀವು ಈಗಾಗಲೇ ಮಾಡಿದ ವಿವಿಧ ರೀತಿಯ ಅಭಿನಯದ ತುಣುಕುಗಳನ್ನೂ ಹಾಗೂ ನಿಮಗೆ ತಿಳಿದಿರುವ ಸಂಗೀತ-ನೃತ್ಯ ಇತ್ಯಾದಿ ಕಲೆಗಳ ಪರಿಚಯವನ್ನೂ ಗಮನಿಸಲಾಗುತ್ತದೆ. ಸಂದರ್ಶನಕ್ಕೆ ಬರುವಾಗ ದೈಹಿಕ ವ್ಯಾಯಾಮಕ್ಕೆ ಅನುಕೂಲವಾಗುವ ಸಡಿಲವಾದ ಉಡುಪು ಧರಿಸಿ ಬರುವುದು ಅಗತ್ಯ.
- ಸಂದರ್ಶನಕ್ಕೆ ಬಂದುಹೋಗುವ ಪ್ರಯಾಣ ವೆಚ್ಚ ಅಥವಾ ಆ ಸಮಯದಲ್ಲಿ ಊಟತಿಂಡಿಗಳ ಖರ್ಚುಗಳನ್ನು ಅಭ್ಯರ್ಥಿಗಳೇ ಭರಿಸಿಕೊಳ್ಳಬೇಕು. ನೀನಾಸಮ್‌ನ ಉಪಹಾರ ಗೃಹದಲ್ಲಿ ಊಟ-ತಿಂಡಿಯ ವ್ಯವಸ್ಥೆ ದೊರೆಯುತ್ತದೆ.

**ಡಿಪ್ಲೊಮಾ ಇನ್ ಥಿಯೇಟರ್ ಆರ್ಟ್ಸ್: ೨೦೨೫-೨೬**

**ಆಯ್ಕೆಯಾದ ವಿದ್ಯಾರ್ಥಿಗಳು ತರಬೇತಿಗೆ ಹಾಜರಾಗುವಾಗ ತುಂಬಬೇಕಾದ ಶುಲ್ಕಗಳು ಹೀಗಿವೆ:**

ಊಟ/ವಸತಿ ಭಾಗಶಃ ಶುಲ್ಕ: ರೂ. ೩೫,೦೦೦ (ಇಡಿಯ ವರ್ಷಕ್ಕೆ);
ಪರೀಕ್ಷಾ ಶುಲ್ಕ: ರೂ. ೧,೫೦೦ – ಒಟ್ಟು ರೂ. ೩೬,೫೦೦ (ಇಡಿಯ ವರ್ಷಕ್ಕೆ)
ಆರೋಗ್ಯ ಠೇವಣಿ: ರೂ. ೩,೫೦೦ (ಆರೋಗ್ಯಕ್ಕಾಗಿ ಖರ್ಚಾದ ಹಣ ಕಳೆದು ಉಳಿದದ್ದನ್ನು ಹಿಂದಿರುಗಿಸಲಾಗುತ್ತದೆ)

**ಗಮನಿಸಿ:**

**ಸಂದರ್ಶನಕ್ಕೆ ಪ್ರತ್ಯೇಕ ಮಾಹಿತಿ ತಿಳಿಸಲಾಗುತ್ತದೆ; ಅಭ್ಯರ್ಥಿಗಳು ಸೂಚಿತ ದಿನಾಂಕಗಳಂದು ಹಾಜರಿರಬೇಕು. ಆರ್ಥಿಕವಾಗಿ ದುರ್ಬಲರಾದ ಕೆಲವೇ ಅರ್ಹ ಅಭ್ಯರ್ಥಿಗಳಿಗೆ ಶುಲ್ಕದಲ್ಲಿ ರಿಯಾಯ್ತಿ ಲಭ್ಯ, ಅದಕ್ಕಾಗಿ ಅಗತ್ಯವಿದ್ದವರು ದಾಖಲೆಗಳ ಸಮೇತ ಖಾಲಿ ಕಾಗದದಲ್ಲಿ ಪ್ರತ್ಯೇಕ ವಿನಂತಿ ಪತ್ರವನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.**

# Ninasam Theatre Institute

**Heggodu, Sagara, Karnataka 577 417**

**Phone: 08183-295646**

**www.ninasam.org**


## Diploma in Theatre Arts: 2025-26
## Instructions for the Applicants

Applicants to Ninasam Theatre Institute, when applying for entry during 2025-26, need to know the following important details before they fill in their application, and later attending the inteview.

**General Rules:**

1. They must ensure that they abide to all the rules and regulations stipulated in the prospectus. Also they must make it sure that they will adjust themselves to the weather, food and the modest lodging facilities available at the Institute campus.
2. The candidates must be ready for a rigourous training schedule between 7 am and 9 pm (with breaks). They must have the mental and physical stamina to do this, and if selected, will have to produce a certificate by a qualified doctor to that effect.
3. The Institute works on all the days of the week, including Sundays and holidays, and there will only be one mid term vacation.
4. No personal leaves are given to any student during the course. No student can attend any interview, examination etc., during the course duration. Using mobile phones during classes and rehearsals is strictly forbidden.
5. Normally candidates above the age of 30 are not selected.

**The Inteview and its procedures:**

1. For the selection of the batch, the interview will be held seperately in batches. The dates and time of such interview will be informed to the candidates on phone or Whatsapp. In the group interview, applicants are made into smaller batches and music-dance exersises are conducted; in the one to one interview, specific questions and exersises are given to individual applicants.
2. In both the group and one to one inteviews, the main questions and expected demonstrations are related to short excerpts from various plays they have performed, as well as their capacities to sing, dance and play instruments. Candidates must come with loose clothing to be able to do all these.
3. The travel expenses for coming to the interview, and the food expenses are to be borne by the candidates.

**Fee Details: 2025-26**

Fee towards food and stay: Rs. 35,000 (for the whole year); Exam Fee: Rs. 1,500;
TOTAL Rs. 36,500 (for the whole year) and
Health Deposit: Rs. 3,500 (unspent amount will be returned at the end of the year)

Applicants are informed about their interview dates individually on their Whatsapp Numbers.
A few partial concessions in the fees are available to deserving and financially disadvantaged candidates. For this concession, a seperate request letter on blank paper with details and relevant documents are to be attached with the application for admission.